ಕವಿತೆ




ವೀಣಾ ತಿರಕಪಡಿ

ಕಲೆ: ಮುರಳೀಧರ್ ರಾಥೋಡ್




# ರೊಟ್ಟಿ ಆಗುವುದೆಂದರೆ

ಕುದಿ ಎಸರು ಬೆರೆಸಿ ಹಿಟ್ಟೊಳಗೆ
ಚರಚರ ನಾದಿ ಹದವಾಗಿ
ಶೃತಿಯೊಳಗೆ ಲೀನವಾದ ನಾದದಂತೆ

ಅವ್ವ ಹೇಳುತ್ತಾಳೆ;
ಮೆತ್ತಗಾಗಬೇಕಾದರೆ ರೊಟ್ಟಿ
ಕಲೆಸಿದ ಹಿಟ್ಟು:
ಗಟ್ಟಿಯಾಗಬಾರದು
ತೆಳುವೂ ಆಗಬಾರದು

ಆಕಾರ ಕೊಡುವಂತೆ
ಕುಂಬಾರನ ಮಡಿಕೆಗೆ
ಸಿದ್ಧವಾದ ಮಣ್ಣಿನಂತೆ
ಇರಬೇಕು ಮೃದುವಾಗಿ!

ರೊಟ್ಟಿಯೊಂದು ಆಕಾರ ಪಡೆಯಬೇಕೆಂದರೆ;
ಬೇಕಿಲ್ಲ ರೇಖಾಗಣಿತ
ಅಜ್ಜಿಯ ಅನುಭವ ಹೇಳುತ್ತದೆ:
ಬಡಿಯುವುದಕ್ಕೂ ಬೇಕು ಸಂಯಮ!
ಲಯದ ಲೆಕ್ಕದಲ್ಲಿ ಹುಟ್ಟುವ ತಾಳದಂತೆ
ತಟ್ಟುವ ತನ್ಮಯತೆಯಲ್ಲೆ
ನೆಟ್ಟಗಾಗುವುದು ರೊಟ್ಟಿ

ಹಿಟ್ಟು ರೊಟ್ಟಿಯಾಗಬೇಕಾದರೆ;
ಬೀಳಬೇಕು ಬೆಂಕಿಗೆ!
ಬೆಂದು ಸುಟ್ಟುಕೊಳ್ಳಬೇಕು
ರೂಪಾಂತರಗಳ ದಾಟಿ
ಮೈದಾಳುತ್ತದೆ ಒಂದು ರೊಟ್ಟಿ
ಸಣ್ಣಗಾದಂತೆ ರೊಟ್ಟಿಯ ಜೊತೆಗೆ
ಅವ್ವನ ಬದುಕು!!
ರೊಟ್ಟಿಯಾಗುವುದೆಂದರೆ;
ಸುಮ್ಮನೆ ಸುಟ್ಟು ಕೊಳ್ಳುವುದಲ್ಲ.

ರೊಟ್ಟಿಯ ಜೊತೆ ಜೀವ ತೇಯ್ದ ಅವ್ವ
ರೊಟ್ಟಿಯಾಚೆಗೂ ಬದುಕಿದೆ ಎಂದು
ನಕ್ಕು ಬಿಡುವ ಮಗಳು
ನಡುವೆ ನಾನು
ಬೇಯುತ್ತಲೇ  ಸುಟ್ಟು ಕೊಳ್ಳುತ್ತಲೇ
ಸ್ಫುಟವಾಗುವ ನನ್ನಂಥ ಜೀವಗಳು

ಮನ್ವಂತರಗಳ ಕ್ರಮಿಸಿದರೂ
ದಾಟಲಾಗದ ಈ ಗಡಿ ರೇಖೆಗಳು
ತಟ್ಟನೆ ಎಚ್ಚರಿಸುತ್ತವೆ
ಒಳಗೊಳಗೆ ಬೇಯುವ
ಬೇಯುತ್ತಲೇ ಸುಖ ಕಾಣುವ
ಹದವಾಗುವ ಈ ಹುದುಲಿಗೆ

ಹಳಸದಂತೆ ರೊಟ್ಟಿ
ಹೆಣಗುತ್ತಲೇ ಇರುತ್ತದೆ ಜೀವ
ಅನುಗಾಲವೂ ಎದೆಯೊಳಗೆ
ಹಸಿವ ಬಚ್ಚಿಟ್ಟು ಕೊಂಡು
ಎವೆಯೊಳಗೆ ಕನಸುಗಳ
ಮುಚ್ಚಿಟ್ಟುಕೊಂಡು ನಿರಂತರ